ತುಳು, ಕೊಡವ, ಕೊಂಕಣಿ, ಅಕಾಡಮಿಗಳಿಗೆ ಅನುದಾನ.

2304(3384) ಶ್ರೀ ಯೋಗೀಶ್ ಭಟ್ ಎನ್. (ಮಂಗಳೂರು) :— ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತುಳು, ಕೊಂಕಣಿ, ಕೊಡವ ಅಕಾಡಮಿಗಳಿಗೆ ಹೆಚ್ಚಿನ ಅನುದಾನ ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ.

ಶ್ರೀಮತಿ ರಾಣಿಸತೀಶ್ (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರಾಜ್ಯ ಸಚಿವರು) :—

ಅ) ವಾರ್ಷಿಕ ಅನುದಾನವನ್ನು ನೀಡಲಾಗುತ್ತಿದೆ.

ಅ) ಅಕಾಡಮಿಗಳ ಬೇಡಿಕೆಯು ಬಂದಲ್ಲಿ, ಕಾರ್ಯಕ್ರಮಗಳ ಸ್ವರೂಪವನ್ನು ಗಮನಿಸಿ ಹೆಚ್ಚಿನ ಅನುದಾನ ನೀಡಲಾಗುತ್ತಿದೆ.

ಅಧ್ಯಕ್ಷರು :— ಮಂಡಿಸಲಾಯಿತು.

ಸಭೆಯು ವಿರಾಮಕ್ಕೆಂದು 2 ಗಂಟೆ 58 ನಿಮಿಷಕ್ಕೆ ಮಂದೂಡಲಾಯಿತು.

(ಸದನವು 4-20 ನಿಮಿಷಕ್ಕೆ ಸಮಾವೇಶಗೊಂಡಿತು)

ಅಧ್ಯಕ್ಷರು (ಶ್ರೀಎಂ.ವಿ. ವೆಂಕಟಪ್ಪನವರು) ಸನ್ಮಾನ್ಯ ಅಧ್ಯಕ್ಷ ಪೀಠವನ್ನಲಂಕರಿಸಿದರು.

ಪ್ರಕಟಣೆ

ವಿಷಯ: ವಿಧಾನಸಭಾ ಸದಸ್ಯರಾದ ಶ್ರೀ ಚೌಡರೆಡ್ಡಿರವರಿಗೆ ಅಧಿವೇಶನಕ್ಕೆ ಗೈರುಹಾಜರಾಗಲು ಅನುಮತಿ ನೀಡುವ ಬಗ್ಗೆ

ಸನ್ಮಾನ್ಯ ಸಭಾಧ್ಯಕ್ಷರು

ವಿಧಾನಸಭಾ ಸದಸ್ಯರಾದ ಶ್ರೀ ಚೌಡರೆಡ್ಡಿ ಅವರು ದಿನಾಂಕ: 21ನೇ ಜುಲೈ, 2001 ರಿಂದ 8ನೇ ಆಗಸ್ಟ್, 2000, ರವರೆಗೂ ಉತ್ತರ ಭಾರತ ಪ್ರವಾಸವನ್ನು ಕೈಗೊಳ್ಳಲಿರುವುದರಿಂದ ಅಧಿವೇಶನಕ್ಕೆ ದಿನಾಂಕ: 23-7-2000ರಿಂದ ಗೈರು ಹಾಜರಾಗಲು ಅನುಮತಿಯನ್ನು ಕೋರಿರುತ್ತಾರೆ.

ಶ್ರೀ ಚೌಡರೆಡ್ಡಿ ಅವರಿಗೆ ಮೇಲೆ ಸೂಚಿಸಿದ ಅವಧಿಯಲ್ಲಿ ಅಧಿವೇಶನಕ್ಕೆ ಗೈರುಹಾಜರಾಗಲು ಸದನವು ಅನುಮತಿ ನೀಡಿದೆಯೆಂದು ಭಾವಿಸುತ್ತೇನೆ.